**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಮೂಲ ದಾವಾ ನಂಬರಃ 22/2017**

**ಸಿ.ಡಬ್ಲ್ಯೂಃ 1**

ಸಾಕ್ಷಿದಾರಳ ಹೆಸರು : ಅಪೂರ್ವ ಸಿ.ಜಿ.

ತಂದೆಯ ಹೆಸರು : ಎಲ್.ಆರ್. ಗಂಗಾಧರಯ್ಯ

ವಯಸ್ಸು : 26 ವರ್ಷ

ಉದ್ಯೋಗ : ಸಹಾಯಕ ನಿರ್ದೇಶಕರು, ದಾಖಲೆ ವಿಭಾಗ, ಟ್ರುತ್ ಲ್ಯಾಬ್, ಬೆಂಗಳೂರು

ವಾಸ್ತವ್ಯ : ವೈಟ್ ಫೀಲ್ಡ್, ಬೆಂಗಳೂರು

**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು, ತಾಃ 31-10-2025)**

**(ಸಾಕ್ಷಿಯು ವಿ.ಸಿ. ಮೂಲಕ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ.)**

**ಮುಖ್ಯ ವಿಚಾರಣೆಃ ನ್ಯಾಯಾಲಯದಿಂದ,**

ಈ ನ್ಯಾಯಾಲಯದ ಆದೇಶದಂತೆ, ದಿನಾಂಕಃ 11-02-2025 ರಂದು ನಿಪಿ-2, ನಿಪಿ-11 ರಿಂದ 13 ರ ದಾಖಲೆಗಳ ಮೂಲ ಪ್ರತಿಯಲ್ಲಿರುವ ವಿವಾದಿತ ಪ್ರತಿವಾದಿಯವರ ಸಹಿಗಳ ಬಗ್ಗೆ ಅಭಿಪ್ರಾಯ ನೀಡಲು ಬಂದಿರುತ್ತದೆ. ಅದೇ ರೀತಿ ಒಪ್ಪಿತ ದಾಖಲೆಗಳಾದ ಪ್ರತಿವಾದ ಪತ್ರ, ಹೆಚ್ಚುವರಿ ಪ್ರತಿವಾದ ಪತ್ರ, ಪ್ರತಿವಾದಿಯ ವಕಾಲತ್ ನಾಮೆ ಮತ್ತು ಬ್ಯಾಂಕ್ ಖಾತೆಯನ್ನು ತೆರೆಯಲು ನೀಡಿದ ದಿನಾಂಕಃ 09-02-2012 ರ ಅರ್ಜಿಯ ಮೂಲ ಪ್ರತಿ ಮತ್ತು ದಿನಾಂಕಃ 13-04-2015 ರ ಪ್ರಮಾಣ ಪತ್ರವನ್ನು ನನಗೆ ಪರಿಶೀಲನೆಗೆ ಕಳುಹಿಸಿಕೊಟ್ಟಿರುತ್ತಾರೆ. ಈ ಎಲ್ಲಾ ದಾಖಲಾತಿಗಳಲ್ಲಿರುವ ಪ್ರತಿವಾದಿಯವರ ಸಹಿಗಳನ್ನು ಪರಿಶೀಲನೆ ಮಾಡಿರುತ್ತೇನೆ. ಆ ರೀತಿ ಪರಿಶೀಲನೆ ಮಾಡಿದ ನಂತರ ಈ ಮೇಲೆ ಹೇಳಿದ ದಾಖಲಾತಿಗಳಲ್ಲಿರುವ ಒಪ್ಪಿತ ಸಹಿ ಮತ್ತು ವಿವಾದಿತ ಸಹಿಗಳು ಬೇರೆ ಬೇರೆ ಪ್ಯಾಟರ್ನ್ ನಲ್ಲಿ ಇರುವುದರಿಂದ, ಯಾವುದೇ ಒಂದು ನಿರ್ದಿಷ್ಠ ಅಭಿಪ್ರಾಯಕ್ಕೆ ಬರಲು ಆಗುವುದಿಲ್ಲ ಎಂದು ನನ್ನ ವರದಿಯನ್ನು ನೀಡಿರುತ್ತೇನೆ. ಸಾಕ್ಷಿಯು ತಾನು ನೀಡಿದ ವರದಿಯನ್ನು ವಿ.ಸಿ. ಮೂಲಕ ನೋಡಿ ಗುರುತಿಸಿದ್ದು, ಅದನ್ನು ನಿಸಿ-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಸಿ-1(ಎ) ಎಂದು ಗುರುತಿಸಲಾಯಿತು.

**ವಾದಿ ಮತ್ತು ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ.ಎಲ್.ಎನ್. ವಕೀಲರಿಂದ,**

2. ನನ್ನ ವರದಿಯಲ್ಲಿ ಹೇಳಿರುವಂತೆ ವಿವಾದಿತ ಸಹಿಗಳಾದ Q1 ರಿಂದ Q13 ಸಹಿ ಗಳು ಮತ್ತು ಒಪ್ಪಿತ ಸಹಿಗಳಾದ S1 ರಿಂದ 18 ಸಹಿಗಳಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ ಹೌದು.

**ಪಾಟೀ ಸವಾಲುಃ ವಾದಿ ಪರ ಶ್ರೀ ಜೆ.ಡಿ.ಬಿ. ವಕೀಲರಿಂದ,**

3. ನನಗೆ ಕಳುಹಿಸಿಕೊಟ್ಟ ದಾಖಲಾತಿಗಳಲ್ಲಿರುವ ಒಪ್ಪಿತ ಸಹಿಗಳನ್ನು ಮತ್ತು ವಿವಾದಿತ ಸಹಿಗಳನ್ನು ಪರಿಶೀಲನೆ ಮಾಡಿರುತ್ತೇನೆ. ನನ್ನ ವರದಿಯ ಪ್ರಕಾರ ಅವೆರಡೂ ಸಹಿಗಳು ಬೇರೆ ಬೇರೆ ಪ್ಯಾಟರ್ನ್ ನಲ್ಲಿ ಇರುತ್ತದೆ ಎಂದು ಹೇಳಲು ಆಗುವುದಿಲ್ಲ ಎಂದು ಹೇಳಿರುತ್ತೇನೆ ಎಂದರೆ ಹೌದು. ಒಪ್ಪಿತ ಸಹಿಗಳಾದ S1 ಮತ್ತು S2 ಸಹಿಗಳಲ್ಲಿರುವ ಪ್ರಾರಂಭಿಕ ಸುರುಳಿಯಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ, ಸಾಕ್ಷಿಯು ಸ್ವಾಭಾವಿಕ ವ್ಯತ್ಯಾಸ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ಅದೇ ರೀತಿ ಒಪ್ಪಿತ ಸಹಿಗಳಾದ S2 ಮತ್ತು S4 ಸಹಿಗಳಲ್ಲಿರುವ ಪ್ರಾರಂಭಿಕ ಸುರುಳಿಯಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ, ಸಾಕ್ಷಿಯು ಸ್ವಾಭಾವಿಕ ವ್ಯತ್ಯಾಸ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ಅದೇ ರೀತಿ ಒಪ್ಪಿತ ಸಹಿಯಾದ S7 ರಲ್ಲಿರುವ ಸಹಿಗೂ S8 ಮತ್ತು S9 ರಲ್ಲಿರುವ ಸಹಿಗಳಿಗೆ ವ್ಯತ್ಯಾಸ ಇರುತ್ತದೆ ಎಂದರೆ, ಸಾಕ್ಷಿಯು ಸ್ವಾಭಾವಿಕ ವ್ಯತ್ಯಾಸ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ಅದೇ ರೀತಿ S9 ರಲ್ಲಿರುವ ಸಹಿ ಮತ್ತು S11 ರಲ್ಲಿರುವ ಸಹಿಗಳಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ, ಸಾಕ್ಷಿಯು ಸ್ವಾಭಾವಿಕ ವ್ಯತ್ಯಾಸ ಇರುತ್ತದೆ ಎಂದು ಉತ್ತರಿಸಿರುತ್ತಾರೆ. S1 ಮತ್ತು S2 ಸಹಿಗಳನ್ನು ಹಾಕಿದ ವ್ಯಕ್ತಿಯು ತನ್ನ ಸಹಿಯ ಪ್ರಾರಂಭಿಕ ಸುರುಳಿಯಲ್ಲಿ ವ್ಯತ್ಯಾಸ ಮಾಡಿ ಸಹಿ ಹಾಕುತ್ತಾರೆ ಎಂದರೆ, ಸಾಕ್ಷಿಯು ಸ್ವಾಭಾವಿಕ ಸಹಿಗಳನ್ನು ಮಾಡಿ ಹಾಕುತ್ತಾರೆ ಎಂದು ಉತ್ತರಿಸಿರುತ್ತಾರೆ. ಒಪ್ಪಿತ ಸಹಿಗಳಲ್ಲಿರುವ ಸುರುಳಿಯ ವ್ಯತ್ಯಾಸದಿಂದ ನನಗೆ ಒಂದು ನಿರ್ದಿಷ್ಠ ಅಭಿಪ್ರಾಯಕ್ಕೆ ಬರಲು ಆಗಲಿಲ್ಲ ಎಂದರೆ ಹೌದು ಹಾಗೆ ಒಪ್ಪಿತ ಸಹಿ ಮತ್ತು ಪ್ರಶ್ನಿತ ಸಹಿಗಳಲ್ಲಿ ಸಂಪೂರ್ಣವಾಗಿ ಸಹಿಗಳ ಪ್ಯಾಟರ್ನ್ ನಲ್ಲಿ ವ್ಯತ್ಯಾಸ ಇರುವುದರಿಂದ ಹಾಗೆ ಅವೆರಡೂ ಸಹಿಗಳಲ್ಲಿ Simplified ಆಗಿರುವುದರಿಂದ, ಪರಿಶೀಲನೆ ಮಾಡಲು ಬೇಕಾದಷ್ಟು Character ಗಳು ಇಲ್ಲದೇ ಇರುವುದರಿಂದ, ಅಭಿಪ್ರಾಯಕ್ಕೆ ಬರಲು ಆಗಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

4. ಪ್ರಶ್ನಿತ ಸಹಿ Q8 ಮತ್ತು ಒಪ್ಪಿತ ಸಹಿ S13 ಗಳಲ್ಲಿರುವ ಪ್ರಾರಂಭಿಕ ಸುರುಳಿಯು ಒಂದೇ ರೀತಿಯಾಗಿರುತ್ತದೆ ಎಂದರೆ ಸರಿಯಲ್ಲ. Q11 ಮತ್ತು S15 ರಲ್ಲಿರುವ ಸಹಿಗಳಲ್ಲಿರುವ ಸುರುಳಿಗಳು ಒಂದೇ ರೀತಿಯಾಗಿರುತ್ತದೆ ಎಂದರೆ ಸರಿಯಲ್ಲ. Q3 ಮತ್ತು S18 ರಲ್ಲಿರುವ ಸಹಿಗಳಲ್ಲಿರುವ ಸುರುಳಿಗಳು ಒಂದೇ ರೀತಿಯಾಗಿರುತ್ತದೆ ಎಂದರೆ ಸರಿಯಲ್ಲ. Q10 ಮತ್ತು S18 ರಲ್ಲಿರುವ ಸಹಿಗಳಲ್ಲಿರುವ ಸುರುಳಿಗಳು ಒಂದೇ ರೀತಿಯಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಸರಿಯಾಗಿ ಸಹಿಗಳನ್ನು ಪರಿಶೀಲನೆ ಮಾಡದೇ ಅಸ್ಪಷ್ಟ ವರದಿ ನೀಡಿರುತ್ತೇನೆ ಎಂದರೆ, ಸಾಕ್ಷಿಯು ಪರಿಶೀಲನೆ ಮಾಡಿರುತ್ತೇನೆ, ಆದರೆ ಸ್ಪಷ್ಟವಾದ ವರದಿ ನೀಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

**ಮರುವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ಸಾಕ್ಷಿಗೆ ವಿ.ಸಿ. ಮುಖಾಂತರ ಓದಿ ಹೇಳಿ ಸರಿ ಇದೆ ಎಂದು ಹೇಳಿದ ನಂತರ ಪ್ರತಿಯನ್ನು ತೆಗೆಯಲಾಗಿರುತ್ತದೆ).**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ, ಭಟ್ಕಳ**